ದಿನಾಂಕ 15–05–2026 ರಂದು ಬೆಳಿಗ್ಗೆ 11.00 ಘಂಟೆಗೆ, ಮಾನ್ಯ ಕುಲಪತಿಗಳ ಸಭಾ ಕೊಠಡಿ, 6ನೇ ಮಹಡಿ, ನಾಯಕ್ ಭವನ್, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಜಿ.ಕೆ.ವಿ.ಕೆ. ಆವರಣ, ಬೆಂಗಳೂರಿನಲ್ಲಿ ನಡೆದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದ 59ನೇ ವ್ಯವಸ್ಥಾಪನಾ ಮಂಡಳಿ ಸಭೆಯ ನಡಾವಳಿಗಳು.

Minutes of the 59th Meeting of the Board of Management of Keladi Shivappa Nayaka University of Agricultural and Horticultural Sciences, Shivamogga held on 15-05-2026 at 11.00 a.m. in the Board Meeting Hall, 6th Floor, Nayak Bhavan, University of Agricultural Sciences, GKVK Campus, Bengaluru.

ಭಾಗವಹಿಸಿದ ಸದಸ್ಯರು: Members Attended:

1.	ಡಾ. ಆರ್. ಸಿ. ಜಗದೀಶ, ಮಾನ್ಯ ಕುಲಪತಿಗಳು, ಕೆ.ಶಿ.ನಾ.ಕೃ.ತೋ.ವಿ.ವಿ, ಶಿವಮೊಗ್ಗ Dr. R. C. Jagadeesha, Hon'ble Vice Chancellor, KSNUAHS, Shivamogga	ಅಧ್ಯಕ್ಷರು Chairman
2.	ಶ್ರೀ ಜಿ. ಹೆಚ್. ಶ್ರೀನಿವಾಸ, ಮಾನ್ಯ ವಿಧಾನ ಸಭಾ ಸದಸ್ಯರು, ತರೀಕೆರೆ ಕ್ಷೇತ್ರ, ಚಿಕ್ಕಮಗಳೂರು ಜಿಲ್ಲೆ Sri G.H. Srinivasa, Member of Karnataka Legislative Assembly, Tarikere Constituency, Tarikere, Chikkamagaluru District	ಸದಸ್ಯರು Member
3.	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಪರವಾಗಿ ಉಪ ಕಾರ್ಯದರ್ಶಿಗಳು ಹಾಜರಾಗಿರುತ್ತಾರೆ The Secretary to Government, Agriculture Department, Government of Karnataka, Bengaluru represented by Sri. Mahesh, Deputy Secretary, Government of Karnataka attended online	ಸದಸ್ಯರು Member
4.	ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಪರವಾಗಿ ಶ್ರೀಮತಿ ಆರ್ ಮಂಜುಳ, ಉಪ ಕಾರ್ಯದರ್ಶಿಗಳು ಹಾಜರಾಗಿರುತ್ತಾರೆ The Secretary to Government, Horticulture Department, Government of Karnataka, Bengaluru represented by Smt. R. Manjula, Deputy Secretary, Government of Karnataka attended online	ಸದಸ್ಯರು Member
5.	ಡಾ. ಪಿ. ಕೆ. ಬಸವರಾಜ, ಶಿಕ್ಷಣ ತಜ್ಞರು, ವಿದ್ಯಾರಣ್ಯಪುರ, ಬೆಂಗಳೂರು Dr. P. K. Basavaraja, Eminent Educationist, Vidyaranyapura, Bengaluru	ಸದಸ್ಯರು Member
6.	ಡಾ. ಬಿ. ಕೆ. ಕುಮಾರಸ್ವಾಮಿ, ಕೃಷಿ–ಕೈಗಾರಿಕೋದ್ಯಮಿ, ಬಸವೇಶ್ವರನಗರ, ಬೆಂಗಳೂರು Dr. B. K. Kumaraswamy, Agro-industrialist, Basaveshwaranagar, Bengaluru	ಸದಸ್ಯರು Member
7.	ಶ್ರೀ ಜೆ. ಜಿ. ಕಾವೇರಿಯಪ್ಪ, ಪ್ರಗತಿಪರ ರೈತರು, ಮಡಿಕೇರಿ Sri J. G. Kaveriappa, Progressive Farmer, New Extension, Madikeri	ಸದಸ್ಯರು Member
8.	ಶ್ರೀ ಹೆಚ್. ಡಿ. ದೇವಿಕುಮಾರ್, ಪ್ರಗತಿಪರ ರೈತರು, ಹೊಳೆಹನಸವಾಡಿ, ಶಿವಮೊಗ್ಗ Sri H. D. Devikumar, Progressive Farmer, Holehanasawadi, Shivamogga	ಸದಸ್ಯರು Member
9.	ಶ್ರೀ ಹೆಚ್. ಎಸ್. ಶಶಾಂಕ್, ಪ್ರಗತಿಪರ ರೈತರು, ರಾಜೇಂದ್ರನಗರ, ಶಿವಮೊಗ್ಗ Sri H. S. Shashank, Progressive Farmer, Rajendranagar, Shivamogga	ಸದಸ್ಯರು Member
10.	ಡಾ. ಶ್ರೀನಿವಾಸ ವಿ., ಡೀನ್, ತೋಟಗಾರಿಕೆ ಮಹಾವಿದ್ಯಾಲಯ, ಮೂಡಿಗೆರೆ Dr. Srinivasa V., Dean, College of Horticulture, Mudigere	ಸದಸ್ಯರು Member
11.	ಡಾ. ಶಾಮರಾವ ಜಹಾಗೀರದಾರ, ಕುಲಸಚಿವರು, ಕೆ.ಶಿ.ನಾ.ಕೃ.ತೋ.ವಿ.ವಿ. ಶಿವಮೊಗ್ಗ Dr. Shamarao Jahagirdar, Registrar, KSNUAHS, Shivamogga	ಸದಸ್ಯ–ಕಾರ್ಯದರ್ಶಿಗಳು Member-Secretary

Members Not Attended: ಸಭೆಯಲ್ಲಿ ಭಾಗವಹಿಸದ ಸದಸ್ಯರು:

1.	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು The Principal Secretary to Government of Karnataka, Finance Department, Bengaluru	ಸದಸ್ಯರು Member
2.	ಡಾ. ಅಜಿತ್ ಸಿಂಗ್ ಯಾದವ್, ಸಹಾಯಕ ಮಹಾನಿರ್ದೇಶಕರು, ಐ.ಸಿ.ಎ.ಆರ್. – ಕೃಷಿ ಅನುಸಂಧಾನ ಭವನ II, ನವದೆಹಲಿ Dr. Ajit Singh Yadav, Assistant Director General, ICAR - Krishi Anusandhan Bhavan II, New Delhi	ಸದಸ್ಯರು Member

******

ಆರಂಭದಲ್ಲಿ, ಕುಲಸಚಿವರಾದ ಡಾ. ಶಾಮರಾವ ಜಹಾಗೀರದಾರ ಇವರು ತಮ್ಮ ಮೊದಲ ವ್ಯವಸ್ಥಾಪನಾ ಮಂಡಳಿ ಸಭೆಗೆ ಸ್ವ–ಪರಿಚಯವನ್ನು ಮಾಡಿಕೊಂಡರು. ಕುಲಸಚಿವರು ಮತ್ತು ವ್ಯವಸ್ಥಾಪನಾ ಮಂಡಳಿಯ ಸದಸ್ಯ ಕಾರ್ಯದರ್ಶಿ, ಕೆ.ಶಿ.ನಾ.ಕೃ.ತೋ.ವಿ.ವಿ., ಶಿವಮೊಗ್ಗ ಇವರು ಗೌರವಾನ್ವಿತ ಅಧ್ಯಕ್ಷರಿಗೆ ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ 59ನೇ ವ್ಯವಸ್ಥಾಪನಾ ಮಂಡಳಿಯ ಸಭೆಗೆ ಆತ್ಮೀಯ ಸ್ವಾಗತವನ್ನು ಕೋರಿದರು.

ಮುಂದುವರೆದು, ಅವಧಿ ಪೂರ್ಣಗೊಳಿಸಿ ಹೊರಹೋಗಲಿರುವ ಸದಸ್ಯರುಗಳಾದ ಡಾ. ಪಿ. ಕೆ. ಬಸವರಾಜ, ಶಿಕ್ಷಣ ತಜ್ಞರು, ವಿದ್ಯಾರಣ್ಯಪುರ, ಬೆಂಗಳೂರು ಹಾಗೂ ಡಾ. ಬಿ. ಕೆ. ಕುಮಾರಸ್ವಾಮಿ, ಕೃಷಿ–ಕೈಗಾರಿಕೋದ್ಯಮಿ, ಬಸವೇಶ್ವರನಗರ, ಬೆಂಗಳೂರು ಇವರುಗಳು ತಮ್ಮ ಸಕ್ರಿಯ ಪಾಲುಗೊಳ್ಳುವಿಕೆ ರಚನಾತ್ಮಕ ಸಲಹೆಗಳು ಹಾಗೂ ವಿಶ್ವವಿದ್ಯಾಲಯಕ್ಕೆ ನೀಡಿದ ಅಮೂಲ್ಯ ಕೊಡುಗೆಗಳಿಗಾಗಿ ವಿಶ್ವವಿದ್ಯಾಲಯದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸಿದರು.

ಕುಲಸಚಿವರು 59ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಪ್ರಸ್ತಾವಿಸುವ ಕಾರ್ಯಸೂಚಿಗಳನ್ನು ಪ್ರಸ್ತುತಪಡಿಸಲು ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷರ ಅನುಮತಿಯನ್ನು ವಿನಂತಿಸಿದರು. ಅನುಮತಿಯ ಮೇರೆಗೆ, 58ನೇ ವ್ಯವಸ್ಥಾಪನಾ ಮಂಡಳಿ ಸಭೆಯ ನಡಾವಳಿಗಳ ಮೇಲೆ ಕ್ರಮ ಕೈಗೊಂಡ ಕಾರ್ಯ ವರದಿ ಮತ್ತು 59ನೇ ವ್ಯವಸ್ಥಾಪನಾ ಮಂಡಳಿಯ ಸಭೆಯ ಕಾರ್ಯಸೂಚಿಯನ್ನು ಮಂಡಿಸಿದರು. ವ್ಯವಸ್ಥಾಪನಾ ಮಂಡಳಿಯ 58ನೇ ಸಭೆಯಲ್ಲಿ ಕೈಗೊಂಡ ಕಾರ್ಯ ವರದಿಯನ್ನು ಸಭೆ ಅನುಮೋದಿಸಿತು. ತದನಂತರ, ಸಭೆಯಲ್ಲಿ ಮಂಡಿಸಿದ ಈ ಕೆಳಗಿನ ಕಾರ್ಯಸೂಚಿಗಳನ್ನು ಚರ್ಚೆಗೆ ಕೈಗೆತ್ತಿಕೊಂಡು ನಿರ್ಣಯಗಳನ್ನು ಈ ಕೆಳಗಿನಂತೆ ಕೈಗೊಳ್ಳಲಾಯಿತು.

At the outset, the Registrar, Dr. Shamarao Jahagirdar, made a brief self-introduction to the Board of Management. The Registrar and the Member-Secretary of Board of Management, KSNUAHS, Shivamogga, extended a warm welcome to Hon'ble Vice Chancellor & Chairman and all the Hon'ble Members, Board of Management to the 59th BoM Meeting.

Further, the Registrar extended sincere thanks to the outgoing Members on successful completion of tenure *viz*., Dr. P. K. Basavaraja, Eminent Educationist, Vidyaranyapura, Bengaluru and Dr. B. K. Kumaraswamy, Agro-industrialist, Basaveshwaranagar, Bengaluru for their valuable active involvement and constructive suggestions and contributions.

The Registrar requested the Chairman of BoM to accord permission to conduct 59th Board of Management Meeting and present the Action Taken Report of 58th BoM and agenda items. With the permission of the Chairman, the Registrar presented the Action Taken Report (ATR) of 58th BoM and the same was approved by the august body. Later, the following agenda items were taken-up for the discussion and resolved as indicated below:

Item	ಶೀರ್ಷಿಕೆ Title	ನಿರ್ಣಯ Resolution
58/15	Approval for the selection of Officers (Tenure basis) in the Keladi Shivappa Nayaka University of Agricultural and Horticultural Sciences, Shivamogga.	The item was approved as presented and permitted to issue the appointment order(s) as per the merit without waiting for confirmation of Minutes. ವಿಷಯಸೂಚಿ ಮಂಡಿಸಿದಂತೆ ಅನುಮೋದಿಸಲಾಯಿತು ಹಾಗೂ ದೃಢೀಕರಣಕ್ಕೆ ಕಾಯದೇ ನೇಮಕಾತಿ ಆದೇಶವನ್ನು ಹೊರಡಿಸಲು ತಿಳಿಸಲಾಯಿತು. ನೇಮಕಾತಿ ಆದೇಶವನ್ನು ಹೊರಡಿಸಿದೆ (ಸಂಖ್ಯೆ: KSNUAHS(S)/ AO/ಅಧಿಕಾರಿ ಹುದ್ದೆ/2102, 2103/05-03-2026 ಮತ್ತು (ಸಂಖ್ಯೆ: KSNUAHS(S)/ AO/ಅಧಿಕಾರಿ ಹುದ್ದೆ 2126, 2127, 2129, 2125, 2130, 2128 ದಿನಾಂಕ: 09-03-2026). The University has issued Appointment Order (Tenure Basis) for Officers vide (No. KSNUAHSS/AO/Officer Post/2102, 2103/05-03-2026 and (No. KSNUAHSS/AO/Officer Post/2126, 2127, 2129, 2125, 2130, 2128 dated: 09-03-2026.
	ಈ ಮೇಲಿನ ವಿಷಯದ ಬಗ್ಗೆ ಗೌರವಾನ್ವಿತ ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳಾದ ಶ್ರೀ ಕಾವೇರಿಯಪ್ಪ ಹಾಗೂ ಶ್ರೀ ಶಶಾಂಕ್ ಇವರುಗಳು ಮರುಪರಿಶೀಲನಾ ಸಮಿತಿಯನ್ನು ರಚಿಸುವಂತೆ ಸೂಚಿಸಿದರು. ಈ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿದ ಸಭೆಯು, ಅಧಿಕಾರಿಗಳ ಹುದ್ದೆಗಳಿಗೆ ಬಂದ ಅರ್ಜಿಗಳನ್ನು ಪರಿಣಿತ ಸಮಿತಿಯು ಪರಿಶೀಲಿಸಿರುತ್ತದೆ ಮತ್ತು ನೇಮಕಾತಿ ಸಮಿತಿಯಲ್ಲಿ ಸ್ವತ: ವ್ಯವಸ್ಥಾಪನಾ ಮಂಡಳಿಯ ಸದಸ್ಯರೊಬ್ಬರು ಸದಸ್ಯರಾಗಿ ಕಾರ್ಯನಿರ್ವಹಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಮರುಪರಿಶೀಲನೆಯನ್ನು ಒಪ್ಪಲಿಲ್ಲ. The Hon’ble Board Members i.e., Sri Kaveriappa and Sri Shashank suggested to constitute a committee. On detailed discussion on the issue, the Board opined that as there will be a expert scrutiny committee for the scrutiny of application and one of the member of the Board of management will serve *as a member* on the selection committee, the house not agreed to re-examine the same. **(Action: Administrative Officer)**	
	Table Agenda	
T.A 58/2	Chief Guest For 10th Convocation of KSNUAHS, Shivamogga to deliver the Convocation Address.	The item was approved as presented and suggested to request the Hon’ble Governor to indicate the name for Chief guest among the list. ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವಕ್ಕೆ ಮುಖ್ಯ ಅತಿಥಿಗಳ ಪಟ್ಟಿಯನ್ನು ಅನುಮೋದಿಸಲಾಯಿತು ಮತ್ತು ಪಟ್ಟಿಯಲ್ಲಿನ ಹೆಸರುಗಳಲ್ಲಿ ಗೌರವಾನ್ವಿತ ರಾಜ್ಯಪಾಲರಿಂದ ನಿಗದಿಪಡಿಸಿದ ಹೆಸರನ್ನು ಪಡೆಯಲು ಸೂಚಿಸಲಾಯಿತು. ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವಕ್ಕೆ ಮುಖ್ಯ ಅತಿಥಿಗಳ ಹೆಸರನ್ನು ಸೂಚಿಸಲು ಗೌರವಾನ್ವಿತ ರಾಜ್ಯಪಾಲರಿಗೆ (No. VC/ KSNUAHS(S)/ 10th Convocation /1-4/2025 -26/ 1808, dated: 24-03-2026) ರಲ್ಲಿ ಪತ್ರ ಬರೆಯಲಾಗಿದೆ. The University has requested the Hon'ble Governor and Chancellor to indicate the name of the Chief Guest for the 10th Convocation.
	ಈ ವಿಷಯದ ಬಗ್ಗೆ ಗೌರವಾನ್ವಿತ ರಾಜ್ಯಪಾಲರ ಸೂಚನೆಯಂತೆ ವಿಶ್ವವಿದ್ಯಾಲಯವು 10ನೇ ಘಟಿಕೋತ್ಸವಕ್ಕೆ ಆಯ್ಕೆಯಾದ ಅತಿಥಿಗಳನ್ನು ಪ್ರತ್ಯೇಕವಾಗಿ ಸಂಪರ್ಕಿಸಿ ಅವರ ಒಪ್ಪಿಗೆಯನ್ನು ಪಡೆದು ಅಂತಿಮವಾಗಿ ಅನುಮೋದನೆಯನ್ನು ಪಡೆಯಲು ಸೂಚಿಸಲಾಯಿತು. As indicated by the Hon’ble Governor, it was suggested to contact the guests as per the sequence of the list and obtain the Consent and send for final approval. **(Action: Registrar)**	

T.A 58/6	Proposal for up-gradation of present account system to the Web Technology with Oracle 19C/ Postgre SQL DB on a cloud technology and backup server for financial data of Comptroller Office and all the College and Stations.	Item approved as presented. However, members suggested formulate a Technical Committee and Two Board Members should be in the Technical Committee. Details should be presented in front of Technical Committee before processing. ವಿಶ್ವವಿದ್ಯಾಲಯದ ಒಬ್ಬರು ವ್ಯವಸ್ಥಾಪನಾ ಮಂಡಳಿ ಸದಸ್ಯರನೊಳಗೊಂಡಂತೆ ತಾಂತ್ರಿಕ ಸಮಿತಿಯನ್ನು ರಚಿಸಲು ಕ್ರಮವಹಿಸಲಾಗುವುದು . It has been decided to constitute Technical Committee with Two Members of the Board of Management, KSNUAHS, Shivamogga (Decision of 58th Board of Management meeting).
ಗೌರವಾನ್ವಿತ ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಶ್ರಿ. ಕಾವೇರಿಯಪ್ಪ ಇವರು ಹಣಕಾಸು ಸಮಿತಿ ಸೇರಿದಂತೆ ವಿಶ್ವವಿದ್ಯಾಲಯವು ರಚಿಸಿದ ವಿವಿಧ ಸಮಿತಿಗಳಲ್ಲಿ ಎಲ್ಲಾ ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳಿಗೆ ಸಮಾನ ಅವಕಾಶ ನೀಡಬೇಕೆಂದು ಸಲಹೆ ನೀಡಿದರು (59ನೇ ವ್ಯವಸ್ಥಾಪನಾ ಮಂಡಳಿ ಸಭೆಯ ನಿರ್ಧಾರದಂತೆ). As per the suggestion of Hon'ble Board Member Sri. Kaveriappa for equal opportunity should be given all the Members of Board of Management in various Committee constituted by the University including the Finance Committee (Decision of 59th Board of Management meeting). **(Action: Administrative Officer)**		

Minutes of 59th meeting (15-05-2026).

No.	ಕಾರ್ಯಸೂಚಿ/ Agenda	ನಿರ್ಣಯ /Resolution
Item No.59/1	Presentation of Budget for the Financial Year 2026-27 of KSNUAHS, Shivamogga for seeking approval for operating budget under different Head of Accounts in respect of different funds from April – 2026 and seeking approval for disbursement of salary of the employees working under various posts other than HRMS from April – 2026 of the Financial Year 2026-27.	ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಕೂಲಂಕಷ ಚರ್ಚೆಯ ನಂತರ, ಕಾರ್ಯಸೂಚಿಯಲ್ಲಿ ಪ್ರಸ್ತುತಪಡಿಸಿದಂತೆ 2026–27ರ ವಿವಿಧ ಲೆಕ್ಕಪತ್ರ ಶೀರ್ಷಿಕೆಗಳ ಅಡಿಯಲ್ಲಿ ಕಾರ್ಯಾಚರಣಾ ಬಜೆಟ್‌ನ ಅಂಶವನ್ನು ಅನುಮೋದಿಸಿತು. After thorough discussion, the Board approved the item on operating budget under different Head of Accounts for 2026-27, as presented in the agenda. **ವ್ಯವಸ್ಥಾಪನಾ ಮಂಡಳಿಯು ಸೂಚಿಸಿದಂತೆ,** 2026–27ನೇ ಸಾಲಿನ ಸಮಗ್ರ ಕ್ರಿಯಾ ಯೋಜನೆ ಕುರಿತು ವಿವರವಾದ ಮಾಹಿತಿಯನ್ನು ಮುಂದಿನ **ವ್ಯವಸ್ಥಾಪನಾ ಮಂಡಳಿ** ಸಭೆಯಲ್ಲಿ ಮಂಡಿಸಲಾಗುವುದು. **The comprehensive action plan for the year 2026-27 with detailed information, as suggested, will be submitted in the next meeting of BOM.** **(Action: Registrar/Comptroller)**
Item No.59/2	ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ಯೋಗೀಶ್ ಎಲ್ ಎನ್, ಸಹಾಯಕ ಪ್ರಾಧ್ಯಾಪಕರು, ಕೃ.ತೋ.ಸಂ.ಕೇಂದ್ರ, ಬಾವಿಕೆರೆ ಇವರು ಈ ಹಿಂದೆ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ ತತ್ಪೂರ್ವದ ಸೇವೆಯನ್ನು ಪರಿಗಣಿಸಿ ಸಿ.ಎ.ಎಸ್.–2016 ರ ನಿಯಮಾವಳಿಗಳ ಅಡಿಯಲ್ಲಿ ಮುಂಬಡ್ತಿ ನೀಡುವ ಕುರಿತು. Regarding the promotion of Dr. Yogish L N, Assistant Professor, AHRS, Bavikere, working in Keladi Shivappa Nayaka University of Agricultural and Horticultural Sciences, Shivamogga, under CAS-2016 guidelines, in consideration of his past service as Assistant Professor.	ವಿಶ್ವವಿದ್ಯಾಲಯವು ಡಾ. ಯೋಗೀಶ್ ಎಲ್ ಎನ್, ಸಹಾಯಕ ಪ್ರಾಧ್ಯಾಪಕರು, ಕೃ.ತೋ.ಸಂ.ಕೇಂದ್ರ, ಬಾವಿಕೆರೆ ಇವರು ಈ ಹಿಂದೆ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ ತತ್ಪೂರ್ವದ ಸೇವೆಯನ್ನು ಪರಿಗಣಿಸಿ ಸಿ.ಎ.ಎಸ್.–2016 ಪ್ರಸ್ತಾವನೆಗೆ ವ್ಯವಸ್ಥಾಪನಾ ಮಂಡಳಿಯ ಗಮನಕ್ಕೆ ತಂದು ವಿಶ್ವವಿದ್ಯಾಲಯವು ಸೂಕ್ತ ನಿರ್ದೇಶನ ಮತ್ತು ಸ್ಪಷ್ಟ ಅಭಿಪ್ರಾಯಕ್ಕಾಗಿ ಸರ್ಕಾರವನ್ನು ಕೋರಿದೆ. ಚರ್ಚೆಯ ನಂತರ, ವ್ಯವಸ್ಥಾಪನಾ ಮಂಡಳಿಯು, ಈ ಹಿಂದಿನ ಸೇವಯನ್ನು ಮುಂಬಡ್ತಿಗೆ ಪರಿಗಣಿಸಾಲು ಸಾಧ್ಯವಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿತು. Regarding the promotion of Dr. Yogish L N, Assistant Professor, AHRS, Bavikere, working in KSNUAHS, Shivamogga, under CAS-2016 guidelines, in consideration of his past service as Assistant Professor. The Board after thorough discussion noted the point and opined that it is not possible to consider the previous service for promotion. **(Action: Administrative Officer)**

ಚರ್ಚಿಸಲಾದ ಇತರ ವಿಷಯಗಳು **Other Issue Discussed**	
Point No. 1	ಶ್ರೀ ಶ್ರೀನಿವಾಸ, ವ್ಯವಸ್ಥಾಪನಾ ಮಂಡಳಿ ಸದಸ್ಯರು ಹಾಗೂ ಮಾನ್ಯ ಶಾಸಕರು ಇವರು ಶಿವಮೊಗ್ಗ/ಇರುವಕ್ಕಿ ವಿಶ್ವವಿದ್ಯಾಲಯದ ಆವರಣದಲ್ಲಿ ಕಾನೂನು ಕೋಶವನ್ನು ಸ್ಥಾಪಿಸಲು ಸಲಹೆ ನೀಡಿದರು. Sri Srinivas, Hon'ble Board Member and Member of Legislative Assembly, suggested for the establishment of Legal Cell at Shivamogga/Iruvakki Campuses. **(Action: Administrative Officer)**
Point No. 2	ಗೌರವಾನ್ವಿತ ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಶ್ರೀ ಕಾವೇರಿಯಪ್ಪ, ಇವರು ಐ.ಡಿ.ಪಿ. ಯೋಜನೆಯ ಸಮಗ್ರ ಮಾಹಿತಿಯ ಸಲುವಾಗಿ ಸೂಕ್ತವಾದ ಸಮಿತಿಯನ್ನು ರಚಿಸುವಂತೆ ಸೂಚಿಸಿದರು. ಈ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿದ ಸಭೆಯು, ಅದು ಐ.ಸಿ.ಎ.ಆರ್. ಯೋಜನೆಯಾಗಿದ್ದು ಅದರ ಮಾರ್ಗದರ್ಶನದಂತೆ ಅನುಷ್ಠಾನಗೊಂಡಿರುವುದರಿಂದ ಮಾಹಿತಿ ಸಮಿತಿಯ ಅಗತ್ಯವಿಲ್ಲವೆಂದು ಅಭಿಪ್ರಾಯಪಟ್ಟಿತು. Sri Kaveriappa, Hon'ble Board Member suggested to constitute a suitable Committee regarding IDP Project issue. On a detailed discussion on the issue, the Board opined that IDP is an ICAR project and implemented on the ICAR guidelines and hence opined that no need to constitute an information committee. **ಸದರಿ ವಿಷಯದಲ್ಲಿ ಗೌರವಾನ್ವಿತ ಸದಸ್ಯರುಗಳಿಂದ ನಡಾವಳಿ ಮೇಲಿನ ತಮ್ಮ ಅವಲೋಕನದಲ್ಲಿ ವಿಭಿನ್ನ ಅಭಿಮತ ವ್ಯಕ್ತವಾಗಿರುತ್ತದೆ ಹಾಗೂ ಬಹುಪಾಲು ಸದಸ್ಯರು ಕರಡು ನಡಾವಳಿಯನ್ನು ಅನುಮೋದಿಸಿರುತ್ತಾರೆ. ಮಾನ್ಯ ಸದಸ್ಯರೊಬ್ಬರ ಅವಲೋಕನದಲ್ಲಿ ಐ.ಡಿ.ಪಿ.ಯ 2026–27ನೇ ಸಾಲಿನ ಕ್ರಿಯಾ ಯೋಜನೆ ಬಗ್ಗೆ ಹೇಳುವುದಾದರೆ, ಪ್ರಸ್ತುತ ಸಾಲಿನಲ್ಲಿ ಸದರಿ ಯೋಜನೆಯೇ ಚಾಲ್ತಿಯಲ್ಲಿರುವುದಿಲ್ಲ. ಆದ್ದರಿಂದ, ಈ ಕುರಿತು ಸಮಿತಿ ರಚನೆ ಅಗತ್ಯವಾಗಿಲ್ಲದ ಕಾರಣ, ಕರಡು ನಡಾವಳಿಯನ್ನು ಪರಿಗಣಿಸಲಾಯಿತು.** **The observation received from among the Hon'ble Members are different and majority have approved the draft resolution. As observed by one of the Member regarding requirement of action plan for 2026-27, it is to submit that the project is not in existence during the said period. In view of this, the draft resolution is considered.** **(Action: Administrative Officer)**
Point No. 3	ವ್ಯವಸ್ಥಾಪನಾ ಮಂಡಳಿ ಸದಸ್ಯರು ಇರುವಕ್ಕಿ ಆವರಣದಲ್ಲಿ ಕೃಷಿ ಮಹಾವಿದ್ಯಾಲಯವನ್ನು ಹಾಗೂ ಕತ್ತಲಗೆರೆಯಲ್ಲಿ ಡಿಪ್ಲೊಮಾ ಕಾಲೇಜು ಪುನ: ಪ್ರಾರಂಭಿಸಲು ಅನುಮತಿಯನ್ನು ಕೋರಿ ಕರ್ನಾಟಕ ಸರ್ಕಾರಕ್ಕೆ ಪತ್ರ ಬರೆಯಲು ಸೂಚಿಸಿದರು. The Hon'ble Members suggested to write a letter to Government of Karnataka for the permission to start College of Agriculture, at Iruvakki Campus and re-start of Diploma College at Kathalagere. **(Action: Director of Education and Registrar)**
Point No. 4	ಕೆಲವು ಗುತ್ತಿಗೆ ಕಾರ್ಮಿಕರು ನ್ಯಾಯಾಲಯದ ಮೊರೆ ಹೋಗಿರುವ ವಿಷಯ ಚರ್ಚಿಸಲಾಗಿ, ಅಂತಹ ಗುತ್ತಿಗೆ ಕಾರ್ಮಿಕರನ್ನು ಅವರ ಪ್ರಸ್ತುತ ಒಪ್ಪಂದದ ಅವಧಿ ಪೂರ್ಣಗೊಂಡ ನಂತರ ನವೀಕರಣ ಅಥವಾ ಮರು ನಿಯೋಜನೆಗೆ ಪರಿಗಣಿಸಬಾರದು ಎಂಬ ಅಭಿಪ್ರಾಯವನ್ನು ಮಂಡಳಿಯು ವ್ಯಕ್ತಪಡಿಸಿರುತ್ತದೆ. ಆದರೆ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರಿನಲ್ಲಿ ಇಂತಹದೇ ಪ್ರಕರಣದಲ್ಲಿ ನ್ಯಾಯಾಲಯ ತಡೆಯಾಜ್ಞೆ ನೀಡಿರುವ ಹಿನ್ನೆಲೆಯಲ್ಲಿ ಮತ್ತು ಸದರಿ ಪ್ರಕರಣ ನ್ಯಾಯಾಲಯದಲ್ಲಿರುವ ಅಂಶವನ್ನು ಗಮನದಲ್ಲಿಟ್ಟುಕೊಂಡು ಈ ವಿಷಯವನ್ನು ಮತ್ತೊಮ್ಮೆ ಚರ್ಚಿಸುವುದು ಸೂಕ್ತವೆಂದು ಕೋರಲಾಗಿದೆ Non consideration for renewal of contractual labourers on expiry of their term who have gone to court needs to be reviewed in view of the stay from the court in similar case at UAS, Bangalore and presently the issue is pending before the court. (Action: Administrative Officer)

ಸದಸ್ಯ–ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಂಡಿತು.

The Meeting ended with the proposal of Vote of Thanks by Member Secretary.

Sd/-	Sd/-
(ಡಾ. ಆರ್. ಸಿ. ಜಗದೀಶ) ಕುಲಪತಿಗಳು ಮತ್ತು ಅಧ್ಯಕ್ಷರು, ವ್ಯವಸ್ಥಾಪನಾ ಮಂಡಳಿ. (Dr. R. C. Jagadeesha,) Vice Chancellor - Chairman, Board of Management.	(ಡಾ. ಶಾಮರಾವ ಜಹಾಗೀರದಾರ) ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿಗಳು, ವ್ಯವಸ್ಥಾಪನಾ ಮಂಡಳಿ. (Dr. Shamarao Jahagirdar) Registrar & Member Secretary, Board of Management

ಕುಲಸಚಿವರು
ಕುಲಸಚಿವರು
Registrar
ಕೆ.ಶಿ.ನಾ/ಕೃ.ತೋ.ವಿ.ವಿ., ಶಿವಮೊಗ್ಗ
K.S.N.U.A.H.S., Shivamogga.